> ತ್ರಿವೇಣಿ ಹೆಚ್ಚು ಮಾತಿನವರೂ ಅಲ್ಲ, ನಾವು ಹತ್ತು ಮಾತನಾಡಿದರೆ, ಅವರದು ಒಂದು ಮಾತು. ಆದರೆ ಶ್ರದ್ಧೆಯಿಂದ ನಮ್ಮ ಮಾತನ್ನು ಕೇಳಿಸಿಕೊಳ್ಳುತ್ತಿದ್ದರು.

ಸದ್ಯ ನೀವು ಅವರಿಂದ ತಪ್ಪಿಸಿಕೊಂಡು ಬಚಾವ್ ಆಗುವುದೇ ಅಸಾಧ್ಯ!

ಆದರೆ ತನ್ನ ಬೆಳವಣಿಗೆಯ ಬಗ್ಗೆ ಒಂದೇ ಒಂದು ಅಕ್ಷರವೂ ಮಾತಾಡದ, ಬಡಾಯಿ ಕೊಚ್ಚದ, ಒಬ್ಬರು ಲೇಖಕಿ ಇದ್ದರು ಎಂದರೆ ನೀವು ನಂಬುತ್ತೀರಾ? ನಂಬಲೇಬೇಕು. ಅವರೇ ತ್ರಿವೇಣಿ.

ತ್ರಿವೇಣಿ ನಯ ವಿನಯಗಳ ಪ್ರತೀಕ. ತನ್ನ ಬಗ್ಗೆ, ತನ್ನ ಕೃತಿಯ ಬಗ್ಗೆ ಒಂದಿಷ್ಟು ಹೇಳಿಕೊಳ್ಳದ ವಿನಯ. ಮಾತೂ ಮಿತ, ಹಿತ.

ಹಾಗೆ ನೋಡಿದರೆ ತ್ರಿವೇಣಿಯವರಷ್ಟು ಗಟ್ಟಿ ಕಾದಂಬರಿಗಳನ್ನು ಬರೆದವರು ಕಾದಂಬರಿಗಾರ್ತಿಯರಲ್ಲಿಯೇ ಯಾರೂ ಇಲ್ಲ ಎಂದು ಧಾರಾಳವಾಗಿ ಹೇಳಿಬಿಡಬಹುದು. ಅವರು ಬರೆದದ್ದು ಎಲ್ಲವೂ ಗಟ್ಟಿಯೇ. ಅವರ ಲೇಖನಿಯಿಂದ ಜೊಳ್ಳು ಉದುರಿದ್ದು ಬಹಳ ಕಡಿಮೆ.

'ಬೆಳ್ಳಿಮೋಡ' ಕಾದಂಬರಿಯ ಮುದ್ರಣ ಮುಗಿಸಿ ಅದರ ಒಂದು ಪ್ರತಿಯನ್ನು ಅವರಿಗೆ ತೋರಿಸಲು ಅವರ ಮನೆಗೆ ನಾನು ಹೋದೆ. ವಾಸ್ತವವಾಗಿ ತ್ರಿವೇಣಿಯವರನ್ನು ನೋಡಲೆಂದೇ ನಾನು ಹೋದದ್ದು, ಅದುವರೆಗೂ ಅವರನ್ನು ನಾನು ನೋಡಿರಲಿಲ್ಲ. ಯಾವುದೋ ಒಂದು ಸಮಾರಂಭದಲ್ಲಿ ಅವರನ್ನು ನಾನು ದೂರದಿಂದ ನೋಡಿದ್ದೆ, ಅಷ್ಟೇ.

ಈಗಾಗಲೇ ಅವರು ನನ್ನ ಹೆಸರನ್ನು ಕೇಳಿದ್ದರು. ನನ್ನ ಕಥೆಗಳನ್ನು ಓದಿದ್ದರು. ಇಷ್ಟಲ್ಲದೆ 'ಚಿತ್ರಗುಪ್ತ' ಪತ್ರಿಕೆಯಲ್ಲಿ ನಾನು ಉಪಸಂಪಾದಕನಾಗಿದ್ದಾಗ, ಅವರ ಒಂದು ಕೃತಿಯನ್ನು ವಿಮರ್ಶೆ ಮಾಡಿದ್ದೆ.

ನಾನು ಹೋದೊಡನೆ 'ನೀವೆ ಬಂದಿರಾ, ಸಾರ್' ಎಂದರು ಆತ್ಮೀಯವಾಗಿ.

'ಯಾಕೆ ಬರಬಾರದೆ?' ಎಂದೆ.

'ಅಯ್ಯೋ, ಉಂಟೇ? ಬಂದದ್ದು ತುಂಬಾ ಸಂತೋಷ. ನೀವೇ ಪುಸ್ತಕ ತೆಗೆದುಕೊಂಡು ಬಂದಿದ್ದೀರಲ್ಲ ಎಂದೆ ಅಷ್ಟೇ' ಎನ್ನುತ್ತ 'ಎರಡೇ ಎರಡು ನಿಮಿಷ' ಎಂದು ಎದ್ದು ಒಳಗೆ ಹೋದರು. ನಾಲ್ಕು ಕೋಡುಬಳೆಯನ್ನು ಒಂದು ತಟ್ಟೆಯಲ್ಲಿ ಹಾಕಿ ಬಂದು 'ತಗೊಳ್ಳಿ' ಎಂದು ನನ್ನೆದುರಿಗೆ ಕುಳಿತು ಮಾತು ಮುಂದುವರಿಸುವಿಕೆ.

ತ್ರಿವೇಣಿ ಹೆಚ್ಚು ಮಾತಿನವರೂ ಅಲ್ಲ, ನಾವು ಹತ್ತು ಮಾತನಾಡಿದರೆ, ಅವರದು ಒಂದು ಮಾತು. ಆದರೆ ಶ್ರದ್ಧೆಯಿಂದ ನಮ್ಮ ಮಾತನ್ನು ಕೇಳಿಸಿಕೊಳ್ಳುತ್ತ ಮೌನವಾಗಿ ಕುಳಿತುಬಿಡುತ್ತಿದ್ದರು.

ಅವರು ಹೆಚ್ಚಿಗೆ ಮಾತಾಡದಿದ್ದರೂ ಶ್ರದ್ಧೆಯಿಂದ ನಮ್ಮ ಮಾತನ್ನು ಕೇಳಿಸಿಕೊಳ್ಳುತ್ತಾ ಇದ್ದಾರೆ ಎನ್ನುವುದನ್ನು ಅವರ ಮುಖಭಾವದಿಂದಲೇ ತಿಳಿಯಬಹುದಿತ್ತು.

ಅರ್ಧಗಂಟೆ ಅವರೊಂದಿಗೆ ಮಾತು. ಆದರೆ ತನ್ನ ಕೃತಿಯ ಬಗ್ಗೆ ಚಕಾರವಿಲ್ಲ, ಹೊಗಳಿಕೆ ಇಲ್ಲ. ಅವರಿಗೆ ತಕ್ಕ ಹಾಗೆಯೇ ಪತಿಯೂ ಸಹ. ಶಂಕರ್ ಮೃದುಭಾಷಿ. ಪ್ರೆಸ್ಸಿಗೆ ಬರುವುದು, ಪುಸ್ತಕದ ವಿಚಾರ ನೋಡಿಕೊಳ್ಳುವುದು ಎಲ್ಲ ಶಂಕರ್‌ಗೆ ಸೇರಿದ ಕೆಲಸ. ತ್ರಿವೇಣಿ ಎಂದೂ ನಮ್ಮ ಪ್ರೆಸ್ಸಿಗೆ ಬಂದದ್ದಿಲ್ಲ.

ತ್ರಿವೇಣಿ ಬದುಕಬೇಕಾದಷ್ಟು ದಿನಗಳು ಬದುಕಲಿಲ್ಲ. ಸಾಹಿತ್ಯ ಲೋಕಕ್ಕೆ ಅದರಿಂದ ಭಾರೀ ನಷ್ಟವಾಯಿತು.

(ಮೇ, 1998)